CW.1 PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1689/2022

| | |
|---|---|
| ಸಾಕ್ಷಿದಾರರ ಹೆಸರು | ದೀಪು ಕುಮಾರ್ |
| ತಂದೆಯ ಹೆಸರು | ಗೋಪಾಲ |
| ವಯಸ್ಸು | 25 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಿಳಾಸ | ಹೊನ್ನಿಗನಹಳ್ಳಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 29.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿ ಗೊತ್ತಿರುವುದಿಲ್ಲ. ಚಾಸಾ-3 ರಿಂದ 5 ರವರ ಪರಿಚಯ ಇರುತ್ತದೆ.

2022 ರಲ್ಲಿ ಪೋಲೀಸರು ನನಗೆ ಕರೆ ಮಾಡಿ ನನ್ನ ಅಣ್ಣನಾದ ಮುತ್ತುರಾಜ್ ಇತನಿಗೆ ಅಪಘಾತವಾಗಿದ್ದು ಅದರಲ್ಲಿ ಕಾಲು ಮುರಿದಿರುತ್ತದೆಂದು ಹೇಳಿ ನನ್ನನ್ನು ಕರೆಸಿರುತ್ತಾರೆ. ನಾನು ಆಗ ಠಾಣೆಗೆ ಹೋಗಿರುತ್ತೇನೆ. ನನ್ನ ಬಳಿ ದೂರು ಪಡೆದರು. ನಂತರ ಮಹಜರ್ ಮಾಡಿರುತ್ತಾರೆ. ದಿಃ13.03.2022 ರಂದು ಮಹಜರ್ ಮಾಡಿರುತ್ತಾರೆ. ನನ್ನ ಜೊತೆ ಚಾಸಾ-3, ಚಾಸಾ-4 ರವರು ಹಾಜರಿದ್ದರು. ನಂತರ ನಾನು ನನ್ನ ಅಣ್ಣ ತೀರಿಕೊಂಡಿದ್ದು ಶವಗಾರಕ್ಕೆ ಹೋಗಿರುತ್ತೇವೆ. ಠಾಣೆಯಲ್ಲಿ ನನ್ನ ಮುಂದೆ ಒಂದು ಲಾರಿಯನ್ನು ಹಾಗೂ ನನ್ನ ಅಣ್ಣನ ಬೈಕ್ ನ್ನು ಅದೇ ದಿನ ಅಮಾನತು ಪಡಿಸಿಕೊಂಡಿರುತ್ತಾರೆ.

CW.1 PW.1

ಸಾಕ್ಷಿಗೆ ಸದರಿ ಪ್ರಕರಣದ ದೂರನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾ ಕ್ಷಿಗೆ ಸದರಿ ಪ್ರಕರಣದ ಅಮಾನತು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸ. ಸ. ಅ. ರವರಿಂದ**

ನನ್ನ ಅಣ್ಣನಿಗೆ ದಿಃ13.03.2020 ರಂದು ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ಅಪಘಾತವಾಗಿರುತ್ತದೆಂದರೆ ಸರಿ. ಆ ದಿನ ನನ್ನ ಅಣ್ಣ ತನ್ನ ಸ್ನೇಹಿತನ ಬೈಕಾದ ಟಿ ಎನ್ 70 ಎಎ 3767 ಇದನ್ನು ಓಡಿಸಿಕೊಂಡು ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆಂದರೆ ಸರಿ. ಸದರಿ ಅಪಘಾತವೂ ಬೆಂಗಳೂರು ಕನಕಪುರ ಮುಖ್ಯ ರಸ್ತೆಯ ಪಡುವಣಕೆರೆ ಬಳಿ ನನ್ನ ಅಣ್ಣ ಹೋಗುತ್ತಿದ್ದಾಗ ಒಂದು ಲಾರಿ ಬಂದು ಡಿಕ್ಕಿ ಹೊಡೆಸಿ ಅಪಘಾತವಾಗಿರುತ್ತದೆಂದರೆ ಸರಿ. ನನ್ನ ದೂರಿನಲ್ಲಿ ಟಿ ಎನ್ 33 ಎಜೆ1188 ಈ ಲಾರಿಯ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿರುತ್ತಾನೆಂದು ಹೇಳಿರುತ್ತೇನೆಂದರೆ ಸರಿ.

ಅಮಾನತು ಮಹಜರ್ ನ್ನು ಸಂಜೆ 4.30 ರಿಂದ 5.30 ರವರೆಗೂ ಮಾಡಿರುತ್ತಾರೆಂದರೆ ನನಗೆ ನೆನಪಿಲ್ಲ. ಸದರಿ ಮಹಜರ್ ಗೂ ಚಾಸಾ-3 ಮತ್ತು 4 ರವರು ಸಹಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಈಗ ಸವಿಸ್ತಾರವಾಗಿ ಓದಿ ಹೇಳಿದಂತೆ ನಾನು ದಿಃ14.03.2020 ರಂದು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆಂದರೆ ಸಾಕ್ಷಿಯು ನೆನಪಿಲ್ಲ ಹಾಗೂ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ದಾಖಲೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಿತ ಈ ದಿನ ಆರೋಪಿಗೆ ಸಹಾಯ ಮಾಡಲು ಕೆಲವೊಂದು ವಿಚಾರಗಳು ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಅಪಘಾತದ ಸಮಯದಲ್ಲಿ ನಾನು ನನ್ನ ಹಾಸ್ಟೇಲ್ ನಲ್ಲಿದ್ದೆ. ನಾನು ಅಪಘಾತವನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಪೋಲೀಸರು ಮಾಹಿತಿ ಕೊಟ್ಟ ನಂತರ ನಾನು ಠಾಣೆಗೆ ಬಂದಿರುತ್ತೇನೆಂದರೆ ಸರಿ. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ದೂರಿನಲ್ಲಿ ಏನು ಬರೆದಿರುತ್ತದೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದೂರನ್ನು ಪೋಲೀಸರು ತಯಾರು ಮಾಡಿ ಸಹಿ ಮಾಡಲು ಹೇಳಿದರು ನಾನು ಮಾಡಿರುತ್ತೇನೆಂದರೆ ಸರಿ. ಅಪಘಾತ ಯಾರ ತಪ್ಪಿ ನಿಂದ ಆಗಿರುತ್ತದೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸ್ಥಳ ಮಹಜರ್ ನ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಅಮಾನತು ಪಂಚನಾಮೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**